ಓ ಎಸ್ ನಂ.70/2023
ಪಿ.ಡಬ್ಲ್ಯೂ-೩ ರಾಜಶೇಖರ ತಂದೆ ಹಣಮಂತರಾಯ

(ಇಂದು ದಿನಾಂಕಃ 04-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

ಪಾಟೀ ಸವಾಲುಃ ಶ್ರೀ ಕೆ ಜಿ ಪಿ ವಕೀಲರಿಂದ.

ನನ್ನ ಊರು ಇಂಡಿ ತಾಲೂಕಿನ ಗೋರನಾಳ ಎಂದರೆ ಸರಿ. ೧ನೇ ಪ್ರತಿವಾದಿಗೆ ೨ ಜನ ಹೆಂಡತಿಯರು ಇರುತ್ತಾರೆ. ಮೊದಲನೆಯ ಹೆಂಡತಿಯ ಹೆಸರು ಮಾತ್ರ ನನಗೆ ಗೊತ್ತು. ಮೊದಲನೆಯ ಹೆಂಡತಿಯಾದ ನಜಮಾರವರಿಗೆ ೩ ಜನ ಮಕ್ಕಳಿರುತ್ತಾರೆ. ಸದರಿ ೩ ಜನ ಮಕ್ಕಳಲ್ಲಿ ನನಗೆ ವಾದಿ ಔರಂಗಜೇಬ ಮಾತ್ರ ಗೊತ್ತು. ವಾದಿ ಬಾಸಗಿ ಗ್ರಾಮದಲ್ಲಿ ವಾಸ ಇರುತ್ತಾರೆ. ೧ನೇ ಪ್ರತಿವಾದಿಗೆ ಹಿರಿಯಾಳ ಗ್ರಾಮದಲ್ಲಿ ೩-೪ ಎಕರೆ ಜಮೀನು ಇರುತ್ತದೆ ಮತ್ತು ಬಾಸಗಿ ಗ್ರಾಮದಲ್ಲಿ ಹಳೆ ಮನೆ ಇರುತ್ತದೆ. ವಾದಿ ಮತ್ತು ಪ್ರತಿವಾದಿಗಳ ಮನೆತನದ ವ್ಯವಹಾರದ ಕುರಿತು ನನಗೆ ಗೊತ್ತು. ೧ನೇ ಪ್ರತಿವಾದಿ ಅವರ ಮಕ್ಕಳ ಜವಾಬ್ದಾರಿ ನೋಡಕೊಂಡು ಹೋಗುತ್ತಾರೆ ಎಂದರೆ ಸರಿ.

೨. ೧ನೇ ಪ್ರತಿವಾದಿ ಶಿಕ್ಷಕರಾಗಿ ಇದ್ದು ಈಗ ನಿವೃತ್ತರಾಗಿರುತ್ತಾರೆ ಎಂದರೆ ಸರಿ. ೧ನೇ ಪ್ರತಿವಾದಿಗೆ ಮುದ್ದೇಬಿಹಾಳ ತಾಲೂಕಿನ ಇಂಗಳಗಿ ಬಿ ಗ್ರಾಮದಲ್ಲಿ ಕೂಡಾ ಆಸ್ತಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ೧ನೇ ಪ್ರತಿವಾದಿಯ ಮನೆತನದ ವ್ಯವಹಾರದಲ್ಲಿ ಸಾಕ್ಷಿಯಾಗಿ ಇರುವುದಿಲ್ಲ. ನಾನು ವಾದಿಯು ಅಫಜಲಪೂರದಲ್ಲಿ ತೆಗೆದುಕೊಂಡ ಜಾಗೆಯ ವ್ಯವಹಾರದಲ್ಲಿ ಮಾತ್ರ ಇರುತ್ತೇನೆ, ಉಳಿದ ವ್ಯವಹಾರದಲ್ಲಿ ನಾನು ಇರುವುದಿಲ್ಲ. ೧ನೇ ಪ್ರತಿವಾದಿ ಸದರಿ ಜಾಗೆಯನ್ನು ಖರೀದಿಸಿ, ತನ್ನ ಮಗನಾದ ವಾದಿಯ ಹೆಸರಿನಲ್ಲಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿ ವಾದಿಯೇ ಖರೀದಿಸಿರುತ್ತಾನೆ ಎನ್ನುತ್ತಾರೆ.

ಖರೀದಿ ವ್ಯವಹಾರಕ್ಕೆ ಮತ್ತು ಖರೀದಿ ಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುವುದಿಲ್ಲ.

೩. ನನ್ನ ಮುಖ್ಯ ವಿಚಾರಣೆಯ ವಿಷಯಗಳು ನಾನು ಹೇಳಿದಂತೆ ಬರೆಯಲಾಗಿರುತ್ತದೆ. ವಾದಿ ಜಾಗೆ ಖರೀದಿಸಿದ ಕುರಿತು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಯಲಾಗಿರುತ್ತದೆ. ದಾವಾ ಆಸ್ತಿಯ ಸಂಖ್ಯೆ ಮತ್ತು ಚೆಕ್ಕುಬಂದಿ ಹೇಳಲು ನನಗೆ ಗೊತ್ತಿಲ್ಲ. ವಾದಿ ಕರೆದಿರುವುದರಿಂದ ನಾನು ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿ. ವಾದಿ ಹೇಳಿ ಕೊಟ್ಟ ಹಾಗೆ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.